ದಿನಾಂಕ: 13-07-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು:: ಪ್ರತಿವಾದಿ 4 ಮತ್ತು 5 ಪರ ಶ್ರೀ ಜೆ ಬಿ ಪಾಟೀಲ್ ವಕೀಲರಿಂದ :**

ನನ್ನ ಪೂರ್ವಜರು ರಾಜ ಮತ್ತು ರಾಣಿಯರು ಎಂದರೆ ಸರಿ.

ಕಸ್ತೂರಿ ರಂಗಪ್ಪನಾಯಕನಿಗೆ ಇಬ್ಬರು ಹೆಂಡತಿಯರು, ರಾಣಿ ಲಕ್ಷ್ಮಮ್ಮ ಅಂತಾ ಮೊದಲನೇ ಹೆಂಡತಿ, ಅವರಿಗೆ ಇಬ್ಬರು ಮಕ್ಕಳು ಸರ್ಜಪ್ಪನಾಯಕ ಮತ್ತು ರಾಣಿ ಅಮರಮ್ಮ ಅಂತಾ ಎಂದರೆ ಸರಿ. ಸಾಕ್ಷಿ ಮುಂದುವರೆದು ರಾಣಿ ಮುಂದುವರೆದು ಅಮರಮ್ಮ ಸರ್ಜಪ್ಪನಾಯಕ ಅವರ ಅಕ್ಕ ಎಂದು ನುಡಿಯುತ್ತಾರೆ. ರಾಣಿ ಅಮರಮ್ಮ ಳಿಗೆ 04 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಅಂತಾ ನುಡಿಯುತ್ತಾರೆ. ಅದರಲ್ಲಿ 03 ಜನ ಗಂಡು ಮಕ್ಕಳು ಜೀವಂತ ಇದ್ದಾರೆ ಒಬ್ಬರು ತೀರಿಕೊಂಡಿದ್ದಾರೆ. ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬರು ತೀರಿಕೊಂಡಿದ್ದಾರೆ ಒಬ್ಬರು ಜೀವಂತ ಇದ್ದಾರೆ.

ಕಸ್ತೂರಿ ರಂಗಪ್ಪನಾಯಕನ 2 ನೇ ಹೆಂಡತಿ ರಾಣಿ ಚನ್ನಮ್ಮಳಿಗೆ 03 ಜನ ಗಂಡು ಮಕ್ಕಳು 03 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಹೆಸರು ಗೌಡಮ್ಮ, ಕಾಟಮ್ಮ, ರಾಮಲಿಂಗಮ್ಮ, ಗಂಡು ಮಕ್ಕಳು ರಾಜಾ ಸೋಮಲಿಂಗನಾಯಕ, ರಾಜಾ ಜಡಿನಾಯಕ, ರಾಜಾ ಗೋಸಲನಾಯಕ ಅಂತಾ ಇರುತ್ತಾರೆ. ಗೌಡಮ್ಮ ಮತ್ತು ಕಾಟಮ್ಮಳಿಗೆ ಮಕ್ಕಳಿದ್ದಾರೆ. ಗೌಡಮ್ಮಳಿಗೆ ಇಬ್ಬರು ಗಂಡು ಮಕ್ಕಳು

ಮತ್ತು 04 ಜನ

ಹೆಣ್ಣು ಮಕ್ಕಳಿರುತ್ತಾರೆ. ಅದರಲ್ಲಿ ಗೌಡಮ್ಮನ ದೊಡ್ಡಮಗನಾದ ರಾಜಾ ರಂಗಪ್ಪನಾಯಕ ತೀರಿಕೊಂಡಿರುತ್ತಾರೆ. ಕಾಟಮ್ಮಳಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ, ಒಬ್ಬ ಹೆಣ್ಣು ಮಗಳು ತೀರಿಕೊಂಡಿದ್ದಾರೆ. ಗಂಡು ಮಗ ತೀರಿಕೊಂಡಿದ್ದಾನೆ ಆತನ ಮಕ್ಕಳಿದ್ದಾರೆ. ಅಮರಮ್ಮಳ ವಾರಸುದಾರರನ್ನು ಮತ್ತು ಗೌಡಮ್ಮಳ ವಾರಸುದಾರರನ್ನು ಕಾಟಮ್ಮ ವಾರಸುದದರರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಸುರಪುರನಲ್ಲಿರುತ್ತೇನೆ.

ಕಸ್ತೂರಿ ರಂಗಪ್ಪನಾಯಕ ತಾಯಿಯಾದ ರಾಣಿಕೊಂಡಮ್ಮಳ ದಾವಾದ ಆಸ್ತಿಯಾಗಿರುತ್ತದೆ. ಕೊಂಡಮ್ಮಳ ಗಂಡನ ಹೆಸರು ರಾಜಾ ಸರ್ಜಪ್ಪನಾಯಕ, ಕೊಂಡಮ್ಮ ನನ್ನ ತಂದೆಗೆ ಅಜ್ಜಿಯಾಗಬೇಕು. ಗುರುಗುಂಟಾದಲ್ಲಿ ನಮ್ಮ ಅಜ್ಜಿಗೆ ಸೇರಿದ ಒಂದು ಮನೆ ಇರುತ್ತದೆ. ರಾಣಿಕೊಂಡಮ್ಮಳದು ಒಟ್ಟು 170 ಎಕರೆ ಜಮೀನು ಇದೆ. ರಾಜಾ ಸೋಮಲಿಂಗಪ್ಪನಾಯಕ ನನಗೆ ಚಿಕ್ಕಪ್ಪನಾಗಬೇಕು. ಪ್ರತಿವಾದಿ ನಂ 1 ರಿಂದ 3 ನನಗೆ ಚಿಕ್ಕಪ್ಪಂದಿರಾಗಬೇಕು. ರಾಜಾ ಸೋಮಲಿಂಗನಾಯಕ ಸ ನಂ 28 ನ್ನು ಎಷ್ಟು ವರ್ಷದಿಂದೆ ತನ್ನ ಹೆಸರಿಗೆ ಮಾಡಿಕೊಂಡ ಎಂದು ನನಗೆ ಹೇಳಲು ಆಗುವುದಿಲ್ಲ. ಸ.ನಂ. 28, 29 ಈಗ್ಗೆ 50 ವರ್ಷದಿಂದೆ ಸೋಮಲಿಂಗನಾಯಕ ಹೆಸರಿನಲ್ಲಿ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ಆತನ ಹೆಸರಿಗೆ ಮಾಡಿದ್ದಾರೆ ಅಂತಾ ನನಗೆ ಗೊತ್ತಿದೆ.. ಹೆಸರು ತಪ್ಪು ವರ್ಗಾವಣೆಗೊಂಡಿದೆ ಎಂದು ನಾನು ಯಾವುದೇ ಎ ಸಿ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿಲ್ಲ.

ಪ್ರತಿವಾದಿ ನಂ. 4 ಮತ್ತು 5 ಕಾಟಪ್ಪನ ಮಕ್ಕಳು ಎಂದರೆ ಸರಿ. ಕಾಟಪ್ಪ ಜೀವಂತ ಇಲ್ಲ. ಮರಣ ಹೊಂದಿ ಎಷ್ಟು ವರ್ಷವಾಯಿತು ಗೊತ್ತಿಲ್ಲ. ಕಾಟಪ್ಪ ರಾಜಾ ಸೋಮಲಿಂಗಪ್ಪನಾಯಕರ ಕಡೆಯಿಂದ ಸ ನಂ 28 ಕ್ಕೆ ಸಂಬಂಧಿಸಿದಂತೆ ಯಾವ ಇಸ್ವಿಯಲ್ಲಿ ಖರೀದಿ ಕರಾರು ಒಪ್ಪಂದ ಪತ್ರ ಮಾಡಿಕೊಂಡ ಗೊತ್ತಿಲ್ಲ. 2006 ರಲ್ಲಿ ರಾಜಾ ಸೋಮಲಿಂಗಪ್ಪನಾಯಕ ಕಾಟಪ್ಪನಿಗೆ ಖರೀದಿ ಕರಾರು ಮಾಡಿಕೊಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ಕಾಟಪ್ಪನ ವಾರಸುದಾರರ ರಾಜಾ ಸೋಮಲಿಂಗಪ್ಪನಾಯಕ ನ ವಿರುದ್ಧ ಖರೀದಿ ಮಾಡಿಕೊಡಿ ಅಂತಾ ಹೇಳಿ ಅಸಲು ದಾವಾ ನಂ. 50/2012 ದಾಖಲು ಮಾಡಿದ್ದರು ಎಂದರೆ ಸರಿ. ನಂತರ ರಾಜಾ ಸೋಮಲಿಂಗಪ್ಪನಾಯಕ ಸ. ನಂ. 28 ರ ಅರ್ದ ಆಸ್ತಿ ಯನ್ನು ಕಾಟಪ್ಪನಿಗೆ ವಾರಸುದಾರರಿಗೆ ಬಿಟ್ಟುಕೊಡಲು ಒಪ್ಪಿದ್ದರಿಂದ ಮತ್ತು ಖರೀದಿ ಪತ್ರ ಮಾಡಿಕೊಡಲು ಒಪ್ಪಿದ್ದರಿಂದ ಮತ್ತು ರಾಜಿ ಪ್ರಕಾರ ಖರೀದಿ ಪತ್ರ ಬರೆದುಕೊಟ್ಟಿದ್ದರಿಂದ ಸದರಿ ದಾವಾ ಮುಕ್ತಾಯವಾಯಿತು ಎಂದರೆ ನನಗೆ ಗೊತ್ತಿಲ್ಲ. ನಾನು ಅಸಲು ದಾವೆ 76/2015 ನ್ನು ಈ ಕೇಸಿನ ದಾವಾದ ಆಸ್ತಿಗೆ ಸಂಬಂಧಿಸಿದಂತೆ ಮಾಡಿದ್ದೇನೆಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯರು ನಿರಕಾರಿಸಿದ್ದಾರೆಂದು ಬರೆಯಿಸಿ ಹಾಕಿದ್ದಾರೆಂದರೆ ಸರಿಯಲ್ಲ. ಸ.ನಂ. 29 ಸೋಮಲಿಂಗಪ್ಪನ ಹೆಸರಿಗೆ ವರ್ಗಾವಾಣೆಯಾಯಿತು ಎಂದರೆ ಮೊಸದಿಂದ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ. ಮೋಸದಿಂದ ಖಾತಾ ಮಾಡಿದ ಬಗ್ಗೆ ನಾನು ಯಾವದೇ ಎ ಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ಸ.ನಂ. 29 ನ್ನು ಕಾಟಪ್ಪ ಯಾವಾಗ ಖರೀದಿಸಿದ್ದನು ಎಂದರೆ ಗೊತ್ತಿಲ್ಲ. 1983 ರಲ್ಲಿ

ಸೋಮಲಿಂಗನಾಯಕ ಕಾಟೆಪ್ಪನ ಮಗನಿಗೆ ಖರಿದಿ ಮಾಡಿದ್ದಾರೆಂದರೆ ಗೊತ್ತಿಲ್ಲ. ಸ.ನಂ. 29 ರಲ್ಲಿ ಅಪ್ಪರ ಕೃಷ್ಣ ಪ್ರೊಜಕ್ಟನವರು 27 ಗುಂಟೆ ಸ್ವಾಧೀನ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರಕಾರದವರು ಪರಿಹಾರದ ಹಣವನ್ನು ಶಿವಣ್ಣನಿಗೆ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸ.ನಂ. 28 ರಲ್ಲಿ ಹಟ್ಟಿ ಚಿನ್ನದ ಗಣಿ ಯವರು 36 ಗುಂಟೆಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸ ನಂ 28 ರಲ್ಲಿ ಅಪ್ಪರ ಕೃಷ್ಣ ಪ್ರೊಜೆಕ್ಟನವರು ರವರು 23 ಗುಂಟೆ ಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.. ಸದರಿ ಪರಿಹಾರದ ಹಣವನ್ನು ಯು ಕೆ ಪಿ ಯವರು ರಾಜಾ ಸೋಮಲಿಂಗನಾಯಕರಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಪಹಣಿಯಲ್ಲಿ ಹಟ್ಟಿ ಚಿನ್ನದ ಗಣಿ ಮತ್ತು ಸರಕಾರ ಎಂದು ನಮುದು ಇದೆ ಎಂದರೆ ಸರಿ. ನಾನು ಹಟ್ಟಿ ಚಿನ್ನದ ಗಣಿ ಮತ್ತು ಸರಕಾರದವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸ. ನಂ. 35/1 , 20 ಎಕರೆ 33 ಗುಂಟೆ, ರಾಣಿ ಕೊಂಡಮ್ಮಳಿಗೆ ಸೇರಿದ್ದು ಎಂದರೆ ಸರಿ. ಸದರಿ ಆಸ್ತಿ ನನ್ನ ತಂದೆ ಹೆಸರಿಗೆ ವರ್ಗಾವಣೆಯಾಗಿತ್ತು ಎಂದರೆ ಸರಿ. ಹಟ್ಟಿ ಚಿನ್ನದ ಗಣಿಯವರು 1948 ರಲ್ಲಿ ಸ್ವಾಧೀನಪಡಿಸಿಕೊಂಡಿರಬಹುದು. 1948 ಅಲ್ಲ 1968 ಇರಬಹುದು ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಹಣ ನನಗೆ ಬರಬೇಕು ಅಂತಾ ಕೇಸ್ ಹಾಕಿದ್ದರು ಎಂದರೆ ಸರಿ. ನಂತರ ಹಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಡಿಪಾಸಿಟ್ ಮಾಡಲಾಯಿತು ಎಂದರೆ ಹೋಗಿರಬಹುದು ಎಂದು ನುಡಿಯುತ್ತಾರೆ. ನಮ್ಮ ತಂದೆ ಎಲ್ ಎ ಸಿ

05/1968 ಮತ್ತು ಎಮ್ ಎ 05/1970 ಕೇಸ್ ಹಾಕಿದ್ದರು ಅದು ನಮ್ಮ ತಂದೆ ವಿರುದ್ದವಾಯಿತು ಆದೇಶವಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದುಡ್ಡು ನನ್ನ ತಂದೆಗೆ ಕೊಡಲಿಲ್ಲ. ಪ್ರತಿವಾದಿ ನಂ. 1 ರಿಂದ 3 ರವರಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

( ಚಂದ್ರಶೇಖರ.ಪಿ.ದಿಡ್ಡಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಅಂಗಸೂಗುರು.